ಪಿ ಡಬ್ಲ್ಯೂ ಃ **1 -**

ಸಾಕ್ಷಿಗೆ ದಿನಾಂಕಃ **16.02.2026** ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಪ್ರತಿವಾದಿಗಳ ಪರ: ವಕೀಲರ ಮೂಲಕ ಃ

ದಾವಾ ಸ್ವತ್ತಿನಲ್ಲಿ ಈಗ ನಾನೇ ಸ್ವಾಧೀನದಲ್ಲಿ ಇರುತ್ತೇನೆ. ದಾವಾ ಸಲ್ಲಿಸಿದ ಕಾಲಕ್ಕೆ ದಾವಾ ಸ್ವ ತ್ತಿನ ಪಹಣಿಯು ನನ್ನ ಹೆಸರಿನಲ್ಲಿ ಇತ್ತು. ಈ ಸಂಬಂಧವಾಗಿ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ನಾನು ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇರುತ್ತೇನೆ ಎಂದು ಪಹಣಿಯಲ್ಲಿ ನಮೂದು ಇರುತ್ತದೆ. ನಾನು ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತನ್ನು ಭತ್ತಲವೆಂಕಟಯ್ಯ, ಲಕ್ಷ್ಮಮ್ಮ ಮತ್ತು ವೆಂಕಟರಮಣರವರಿಂದ ಕ್ರಯಕ್ಕೆ ಪಡೆದಿರುತ್ತೇನೆ. ಸದರಿ ಸ್ವತ್ತು ನನ್ನ ಕ್ರಯದಾರರಿಗೆ ಯಾವ ರೀತಿ ಬಂದಿತ್ತು ಎಂದು ನನಗೆ ಗೊತ್ತಿರುವುದಿಲ್ಲ. **1** ನೇ ಪ್ರತಿವಾದಿಯ ತಾತನಿಗೆ ಪಿ.ಟಿ.ಸಿ.ಎಲ್. ಕಾಯ್ದೆಯಡಿಯಲ್ಲಿ ದಾವಾ ಸ್ವತ್ತು ಸರ್ಕಾರದಿಂದ ಮಂಜೂರಾಗಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ಕ್ರಯಕ್ಕೆ ಪಡೆದಿರುವುದು ಊರ್ಜಿತವಾಗಿರುವುದಿಲ್ಲವೆಂದು ಅದನ್ನು ರದ್ದುಪಡಿಸುವಂತೆ **1** ನೇ ಪ್ರತಿವಾದಿಯ ತಂದೆಯು ಎ.ಸಿ. ರವರ ನ್ಯಾಯಾಲಯದಲ್ಲಿ ಪಿ.ಟಿ.ಸಿ.ಎಲ್. ನಂ. **42/1991** ರಂತೆ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ನಾನು ಎ.ಸಿ. ರವರ ಮುಂದೆ ಅರ್ಜಿಯನ್ನು ಸಲ್ಲಿಸಿ, ನಾನು ದಾವಾ ಸ್ವತ್ತಿನಲ್ಲಿಸ್ವಾಧೀನದಲ್ಲಿ ಇದ್ದು, ಆದ್ದರಿಂದ ಗ್ರ್ಯಾಂಟ್‌ನ್ನು ವಜಾ ಮಾಡುವಂತೆ ಕೋರಿದ್ದೆ. ಸದರಿ ಅರ್ಜಿಯ ಸಂಖ್ಯೆ **16/2017-18** ಆಗಿತ್ತು. ಸದರಿ ಪ್ರಕರಣದ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಎ.ಸಿ. ರವರು ನನ್ನ ಪರವಾಗಿ ಆದೇಶ ಮಾಡಿದ್ದು, ಆ ಸಂಬಂಧವಾಗಿ ದಾಖಲೆ ಹಾಜರುಪಡಿಸಿರುತ್ತೇನೆ.

**2.** ಡಿ.ಸಿ. ರವರ ನ್ಯಾಯಾಲಯದಲ್ಲಿ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಮೇಲ್ಮನವಿಯನ್ನು ನಾನು ಸಲ್ಲಿಸಿದ್ದೆ. ಸದರಿ ಮೇಲ್ಮನವಿಯ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ಮೇಲ್ಮನವಿಯು ಈಗ ಯಾವ ಹಂತದಲ್ಲಿ ಇದೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ತಂದೆಗೆ ಒಟ್ಟು **5** ಜನ ಮಕ್ಕಳು. ನಾವು **10-12** ವರ್ಷಗಳ ಹಿಂದೆ ಭಾಗ ಮಾಡಿಕೊಂಡಿರುತ್ತೇವೆ. ದಾವಾ ಸ್ವತ್ತು ನಮ್ಮ **05** ಜನರ ಭಾಗಕ್ಕೆ ಬಂದಿದ್ದು, ಖಾತೆ ನನ್ನ ಹೆಸರಿನಲ್ಲಿ ಇರುತ್ತದೆ. ನನ್ನ ಸಹೋದರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಕೆ.ಲಿಂಗೇಗೌಡ ಎಂಬುವವರು ನನ್ನ ಸಹೋದರ ಆಗಿದ್ದು, ಮೃತರಾಗಿರುತ್ತಾರೆ. ಅವರಿಗೆ ಭಾರತಿ ಎಂಬ ಪತ್ನಿ ಮತ್ತು ಸಂಜೀವ, ರಾಜೀವ ಮತ್ತು ಶಶಿ ಎಂಬ **03** ಜನ ಮಕ್ಕಳು ಇರುತ್ತಾರೆ. ದೊಡ್ಡೇಗೌಡ, ಸಣ್ಣೇಗೌಡ ಮತ್ತು ಕುಳ್ಳೇಗೌಡ ರವರು ನನ್ನ ಸಹೋದರರಾಗಿರುತ್ತಾರೆ. ನಾನು ನನ್ನ ಸಹೋದರರ ಜೊತೆ

ಚರ್ಚೆ ಮಾಡದೇ ನನ್ನ ಹೆಸರಿನಲ್ಲಿ ಖಾತೆ ಇದ್ದ ಕಾರಣ ನಾನು ಒಬ್ಬನೇ ದಾವೆಯನ್ನು ಸಲ್ಲಿಸಿರುತ್ತೇನೆ. ಭತ್ತಲವೆಂಕಟಯ್ಯರವರು ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಪಿ.ಟಿ.ಸಿ.ಎಲ್. ನಂಬರ್ **45/1997-98** ರಂತೆ ನನ್ನ ವಿರುದ್ದ, ಬಸವೇಗೌಡ ಬಿನ್ ಕಾಳನಿಂಗೇಗೌಡ ಮತ್ತು ಕಿವುಡೇಗೌಡ **@** ನಿಂಗೇಗೌಡ ರವರ ವಿರುದ್ದ ಮೇಲ್ಮನವಿಯನ್ನು ದಾವಾ ಸ್ವತ್ತು ಮತ್ತು ಸರ್ವೆ ನಂ. **315/12** ರ **03** ಎಕರೆ **2** ಗುಂಟೆಗೆ ಸಂಬಂಧಿಸಿದಂತೆ ಸಲ್ಲಿಸಿದ್ದರು ಎಂದರೆ ಸರಿ, ಅದು ನಮ್ಮ ಪರವಾಗಿ ಆದೇಶವಾಗಿರುತ್ತದೆ.ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಪಿ.ಟಿ.ಸಿ.ಎಲ್. ಕಾಯ್ದೆಯಡಿಯಲ್ಲಿ ಮಂಜೂರು ಆಗಿರುವುದರಿಂದ ಕ್ರಯ ಪತ್ರವನ್ನು ವಜಾ ಮಾಡಿ, ಸ್ವತ್ತನ್ನು ವಾಪಸ್ ಕೊಡಿಸುವಂತೆ **1** ನೇ ಪ್ರತಿವಾದಿಯ ತಂದೆಯು ಸದರಿ ಮೇಲ್ಮನವಿಯನ್ನು ಸಲ್ಲಿಸಿದ್ದರು ಎಂದರೆ ಸರಿ. ಅದು ನಮ್ಮ ಪರವಾಗಿ ಆದೇಶವಾಗಿರುತ್ತದೆ. ಎ.ಸಿ. ರವರು ಕ್ರಯ ಪತ್ರವನ್ನು ರದ್ದು ಮಾಡಲು ಆದೇಶ ಮಾಡಿ, ಸ್ವಾಧೀನವನ್ನು **1** ನೇ ಪ್ರತಿವಾದಿಯ ತಂದೆಗೆ ನೀಡುವಂತೆ ದಿ: **28.02.2002** ರಂದು ಆದೇಶ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಎ.ಸಿ. ರವರ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ, ನಾನು, ನನ್ನ ಸಹೋದರರು, ನನ್ನ ಮೃತ ಸಹೋದರನ ವಾರಸುದಾರರು ಡಿ.ಸಿ. ರವರ ನ್ಯಾಯಾಲಯದಲ್ಲಿ ಪಿ.ಟಿ.ಸಿ.ಎಲ್. ನಂಬರ್ **15/2004** ರಂತೆ ಮೇಲ್ಮನವಿಯನ್ನು ಸಲ್ಲಿಸಿರುತ್ತೇವೆ ಎಂದರೆ ಡಿ.ಸಿ. ರವರ ನ್ಯಾಯಾಲಯದಲ್ಲಿ ನಮ್ಮ ಪರವಾಗಿ ಆದೇಶವಾಗಿರುತ್ತದೆ. ಆ ಸಂಬಂಧವಾಗಿ ನಾನು ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಡಿ.ಸಿ. ರವರು ತಮ್ಮ ಆದೇಶದಲ್ಲಿ ಪುನರ್ ಪರಿಶೀಲನೆ ಮಾಡುವಂತೆ ಎ.ಸಿ. ರವರಿಗೆ ಕಳುಹಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

**3.** ನಾವು **1** ನೇ ಪ್ರತಿವಾದಿಯ ತಂದೆಯ ವಿರುದ್ದ ಡಿ.ಸಿ. ರವರ ನ್ಯಾಯಾಲಯದಲ್ಲಿ ಪಿ.ಟಿ.ಸಿ.ಎಲ್. **95/2007** ರಂತೆ ಮೇಲ್ಮನವಿಯನ್ನು ಸಲ್ಲಿಸಿರುತ್ತೇವೆ ಎಂದರೆ ನನಗೆ ನೆನಪಿರುವುದಿಲ್ಲ. ಸದರಿ ಪ್ರಕರಣದ ಆದೇಶದಲ್ಲಿ ಎ.ಸಿ. ರವರ ಆದೇಶವನ್ನು ಡಿ.ಸಿ. ರವರು ಎತ್ತಿಹಿಡಿದಿರುತ್ತಾರೆ ಎಂದರೆ ಸರಿಯಲ್ಲ. ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಾವು ಮಾನ್ಯ ಉಚ್ಚನ್ಯಾಯಾಲಯದಲ್ಲಿ ಎ.ಸಿ. ರವರು ಮತ್ತು ಡಿ.ಸಿ. ರವರ ಆದೇಶವನ್ನು ಪ್ರಶ್ನಿಸಿ, ಡಬ್ಲ್ಯೂ.ಪಿ ನಂಬರ್ **2246/2004** ರಂತೆ ಸಲ್ಲಿಸಿರುತ್ತೇವೆ ಎಂದರೆ ನನಗೆ ಗೊತ್ತಿರುವುದಿಲ್ಲ. ಮಾನ್ಯ ಉಚ್ಚನ್ಯಾಯಾಲಯವು ಎ.ಸಿ.ರವರು ಮತ್ತು ಡಿ.ಸಿ. ರವರ ಆದೇಶವನ್ನು ದಿ: **04.08.2004** ರಂದು ಎತ್ತಿಹಿಡಿದಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಂತರ ನಾವು ಮಾನ್ಯ ಉಚ್ಚನ್ಯಾಯಾಲಯದಲ್ಲಿ ರಿಟ್ ಅಪೀಲ್ ನಂಬರ್ **4006/2004** ರಂತೆ ಸಲ್ಲಿಸಿರುತ್ತೇವೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಿ: **16.07.2009** ರಂತೆ ಸದರಿ ರಿಟ್ ಅಪೀಲ್ ವಜಾಗೊಂಡಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಈ ಎಲ್ಲಾ ವಿಚಾರಗಳು ನನಗೆ ಗೊತ್ತಿದ್ದರೂ ಸಹ **1** ನೇ ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು

ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಂತರದಲ್ಲಿ **1** ನೇ ಪ್ರತಿವಾದಿಯು ಮಾವು ಮತ್ತುತೆಂಗು ಬೆಳೆಗಳನ್ನು ದಾವಾ ಸ್ವತ್ತಿನಲ್ಲಿ ಬೆಳೆದು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

**4. 1** ನೇ ಪ್ರತಿವಾದಿಯ ತಂದೆಯು **1** ನೇ ಪ್ರತಿವಾದಿಗೆ ದಾವಾ ಸ್ವತ್ತನ್ನು ದಾನ ಪತ್ರದ ಮೂಲಕ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಒಬ್ಬನೇ ದಾವಾ ಸ್ವತ್ತಿನ ಮಾಲೀಕ ಎಂದು ಸುಳ್ಳು ಹೇಳಿ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನ ಮಾಲೀಕ ಅಲ್ಲ ಎಂದರೆ ಸರಿಯಲ್ಲ. ಎಲ್ಲಾ ನ್ಯಾಯಾಲಯಗಳಲ್ಲಿ ನನ್ನ ಮತ್ತು ನನ್ನ ಸಹೋದರರ ವಿರುದ್ಧವಾಗಿ, **1** ನೇ ಪ್ರತಿವಾದಿ ಮತ್ತು ಅವರ ತಂದೆಯ ಪರವಾಗಿ ಆದೇಶವಾಗಿದೆ ಎಂದರೆ ಸರಿಯಲ್ಲ. ನನ್ನ ವಿರುದ್ಧವಾಗಿ ಆದೇಶವಾಗಿರುವುದರಿಂದ ನಾನು ಸದರಿ ಆದೇಶದ ಪ್ರತಿಗಳನ್ನು ಗೊತ್ತಾಗುತ್ತದೆ ಎಂದು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನ ಮಾಲೀಕ ಮತ್ತು ಸ್ವಾಧೀನದಾರ ಅಗಿರುವುದಿಲ್ಲ, ದಾವಾ ಸ್ವತ್ತಿನ ಸ್ವಾಧೀನವನ್ನುಈಗಾಗಲೇ **1** ನೇ ಪ್ರತಿವಾದಿಯ ತಂದೆಗೆ ವಹಿಸಲಾಗಿದೆ ಎಂದರೆ ಸರಿಯಲ್ಲ. **1** ನೇ ಪ್ರತಿವಾದಿಯ ಹೆಸರಿನಲ್ಲಿ ಖಾತೆ ಇದ್ದು, ಅವರೇ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

**5.** ನಾವು ಸ್ವಾಧೀನದಲ್ಲಿ ಇರುವ ಸ್ವತ್ತನ್ನು **2** ನೇ ಪ್ರತಿವಾದಿಯು ಅಗ್ರಿಮೆಂಟ್ ಮಾಡಿಸಿಕೊಂಡಿರುವುದರಿಂದ ಅವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇನೆ. ಆ ಸಂಬಂಧವಾಗಿ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ನಾನು ದಾಖಲೆಗಳನ್ನು ಸೃಷ್ಟಿ ಮಾಡಿ, **1** ನೇ ಪ್ರತಿವಾದಿಗೆ ತೊಂದರೆ ಕೊಡಲು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಕಂದಾಯ ನ್ಯಾಯಾಲಯಗಳ ಆದೇಶದ ದಾಖಲೆಗಳನ್ನು ಹಾಜರುಪಡಿಸದೇ ಮರೆಮಾಚಿ, ಸುಳ್ಳು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ **13** ರಿಂದ **18** ಫೋಟೋಗಳನ್ನು ಮತ್ತು ಸಿ.ಡಿ.ಯನ್ನು ಸೃಷ್ಟಿ ಮಾಡಿ, ದಾವೆಗೆ ಅನುಕೂಲವಾಗಲಿ ಎಂದು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. **1** ನೇ ಪ್ರತಿವಾದಿಯ ಆಸ್ತಿಯನ್ನು ಕಬಳಿಸಬೇಕು ಎಂಬ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇರುವುದಿಲ್ಲ.</u>

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಮಳವಳ್ಳಿ.